JUNE 02, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಸುಗಮ್ಯ ಭಾರತ ಅಭಿಯಾನ; ವಿಶೇಷಚೇತನರ ಹಕ್ಕುಗಳ ರಕ್ಷಣೆಯಲ್ಲಿ, 9 ವರ್ಷಗಳು ಪೂರ್ಣ.**
- **ವಿಜಯನಗರ ಜಿಲ್ಲೆಯ ಮಕ್ಕಳಲ್ಲಿ, ಅಪೌಷ್ಟಿಕತೆ; ಖನಿಜ ನಿಧಿ ಬಳಸಿ ಪೋಷಿಸಲು, ಜಿಲ್ಲಾಡಳಿತದಿಂದ, ಕ್ರಮ.**
- **ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯ; ಅರಣ್ಯ ಇಲಾಖೆಯಿಂದ ಸಮಗ್ರ ಅಧ್ಯಯನ.**
- **ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರದಿಂದ, ಇ–ಅಪ್ಲಿಕೇಷನ್‌ಗಳ ಮೇಲೆ, ಕಟ್ಟುನಿಟ್ಟಿನ ನಿಗಾ.**

<><><>

**ಈಗ ವಾರ್ತೆಗಳ ವಿವರ**

<><><>

**ಸುಗಮ್ಯ ಭಾರತ ಅಭಿಯಾನ ಯಶಸ್ವಿಯಾಗಿ, 9 ವರ್ಷಗಳನ್ನು ಪೂರ್ಣಗೊಳಿಸಿದೆ. ವಿಶೇಷಚೇತನ ವ್ಯಕ್ತಿಗಳ ಹಕ್ಕುಗಳ ರಕ್ಷಣೆಗಾಗಿ, 2015 ಡಿಸೆಂಬರ್ 3ರಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು, 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಔರ್ ಸಬ್ ಕಾ ವಿಶ್ವಾಸ್' ಧ್ಯೇಯದಡಿ, ವಿಶೇಷಚೇತನರಿಗಾಗಿ, ಎಲ್ಲೆಡೆ ಅಗತ್ಯ ಮೂಲ ಸೌಕರ್ಯ, ಸಾರಿಗೆ ವ್ಯವಸ್ಥೆ ಹಾಗೂ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಒದಗಿಸುವ, ಪರಿಸರ ವ್ಯವಸ್ಥೆ ರೂಪಿಸಲು ಸಂಕಲ್ಪಿಸಿದ್ದರು. ಈಸ್ ಟು ಎಕ್ಸೆಸ್ ಆಪ್ ಸಹ ಅಭಿವೃದ್ಧಿ ಪಡಿಸಲಾಗಿದೆ.**

**ಈ ಕುರಿತು ಒಂದು ವರದಿ..**

***ಸುಗಮ್ಯ ಭಾರತ ಯೋಜನೆಯಡಿ, ಎಲ್ಲ ಸರ್ಕಾರಿ ಕಟ್ಟಡಗಳನ್ನು, ವಿಶೇಷಚೇತನಸ್ನೇಹಿ ಮೂಲ ಸೌಕರ್ಯಗಳೊಂದಿಗೆ ನವೀಕರಿಸಲಾಗುತ್ತಿದೆ. 709 ರೈಲು ನಿಲ್ದಾಣಗಳನ್ನು ವಿಶೇಷಚೇತನರ ಬಳಕೆಗೆ ಅನುರೂಪವಾಗಿ ಪುನರಾಭಿವೃದ್ಧಿಗೊಳಿಸಲಾಗಿದೆ. ಎಲ್ಲ 35 ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ರ್‍ಯಾಂಪ್, ಬ್ರೈಲ್ ಲಿಪಿ ಜೊತೆ, ಮಾಹಿತಿ ಒದಗಿಸುವ ವ್ಯವಸ್ಥೆ ಜಾರಿಗೊಳಿಸಲಾಗಿದೆ.***

*ಕೇಂದ್ರ ಸರ್ಕಾರದ 95 ಆನ್‌ಲೈನ್ ಜಾಲತಾಣಗಳನ್ನು ವಿಶೇಷಚೇತನರ ಬಳಕೆಗೆ ಅನುವಾಗುವಂತೆ, ನಿರ್ವಹಣಾ ಚೌಕಟ್ಟುಗಳನ್ನು ಸುಗಮ್ಯ ಭಾರತ ಅಭಿಯಾನದಡಿ ರೂಪಿಸಲಾಗಿದೆ. ಕರ್ನಾಟಕ ಸೇರಿದಂತೆ, ಒಟ್ಟು 24 ರಾಜ್ಯಗಳಲ್ಲಿ ಬಸ್ ನಿಲ್ದಾಣಗಳನ್ನು ವಿಶೇಷಚೇತನರ ಪ್ರಯಾಣಕ್ಕೆ ಅನುಕೂಲಕರ ರೀತಿಯಲ್ಲಿ ರ‍್ಯಾಂಪ್, ಶೌಚಾಲಯ, ಸಹಾಯವಾಣಿ, ಬ್ರೈಲ್ ಹಾಗೂ ಧ್ವನಿ ಮುದ್ರಿತ ಉದ್ಘೋಷಣೆ ವ್ಯವಸ್ಥೆ ಮೂಲಕ ವಿಶೇಷಚೇತನ ಸ್ನೇಹಿ ಗೊಳಿಸಲಾಗಿದೆ.*

*ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ವಿಶೇಷಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ, ಧಾರವಾಡ ಜಿಲ್ಲೆ ಉಪ ನಿರ್ದೇಶಕ, ಜಗದೀಶ ಕೆಂಪಲಿಂಗಣ್ಣವರ.*

<><><>

ವಿವೇಕ ಧ್ವನಿ (48) + ಜಗದೀಶ ಕೆಂಪಲಿಂಗಣ್ಣನವರ ಧ್ವನಿ (50) ಸೆಕೆಂದುಗಳು

<><><>

ಅಮೃತ ಭಾರತ ಯೋಜನೆಯಡಿ, ಕಲಬುರಗಿ ರೇಲ್ವೆ ನಿಲ್ದಾಣದ ಪುನರಾಭಿವೃದ್ಧಿ ಕಾಮಗಾರಿಗಳನ್ನು, ಕೇಂದ್ರದ ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಪರಿಶೀಲಿಸಿದರು. ಬೀದರ್ ನಿಂದ ವಿಶೇ ' ರೈಲಿನಲ್ಲಿ, ಕಮಲಾಪುರ, ಮಹಾಗಾಂವ ನಿಲ್ದಾಣಕ್ಕೂ ಭೇಟಿ ನೀಡಿ, ಕಲಬುರಗಿ ರೈಲು ನಿಲ್ದಾಣಕ್ಕೆ ಆಗಮಿಸಿದ ಸಚಿವರನ್ನು, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸ್ವಾಗತಿಸಿದರು. ಸೋಲಾಪೂರ ರೇಲ್ವೆ ವಿಭಾಗದ, ವಲಯ ವ್ಯವಸ್ಥಾಪಕ, ಸುಜಿತ್ ಮಿಶ್ರಾ ಸೇರಿದಂತೆ, ರೇಲ್ವೆ ಇಲಾಖೆಯ ಹಿರಿಯ ಅಧಿಕಾರಿಗಳು, ಪಾಲ್ಗೊಂಡಿದ್ದರು.

<><><>

ಬಳಿಕ ಐವಾನ್-ಎ-ಶಾಹಿ ಅಥಿತಿ ಗೃಹದಲ್ಲಿ ಸುದ್ದಿಗೋಷ್ಠಿ ನಡೆಸಿದ ಸಚಿವ ವಿ. ಸೋಮಣ್ಣ, ಮುಂಬೈ ಕರ್ನಾಟಕ-ಕಲ್ಯಾಣ ಕರ್ನಾಟಕಕ್ಕೆ ಸಂಪರ್ಕ ಕಲ್ಪಿಸುವ 257 ಕಿಲೋ ಮೀಟರ್ ಉದ್ದದ, ವಾಡಿ-ಗದಗ ಮಧ್ಯದ ಮೀಟರ್ ಗೇಜ್ ಕಾಮಗಾರಿ, ಮುಂದಿನ 2-3 ವ 'ಗಳಲ್ಲಿ ಪೂರ್ಣಗೊಳ್ಳಲಿದೆ ಎಂದು, ಹೇಳಿದರು.

<><><>

'ಪ್ರಧಾನಮಂತ್ರಿ ಉಚ್ಚತರ ಶಿಕ್ಷಣ ಅಭಿಯಾನ ಯೋಜನೆ' ಅಡಿ, 5 ಕೋಟಿ ರೂಪಾಯಿ ವೆಚ್ಚದಲ್ಲಿ, ಉತ್ತರಕನ್ನಡ ಜಿಲ್ಲೆ, ದಾಂಡೇಲಿ ತಾಲೂಕಿನ, ಅಂಬೇವಾಡಿಯಲ್ಲಿ, ಸರ್ಕಾರಿ ಪ್ರಥಮ ದರ್ಜೆ ಪದವಿ ಮಹಾವಿದ್ಯಾಲಯದಲ್ಲಿ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ, ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ರಾಜ್ಯದಿಂದ ಕೇವಲ 20 ಮಹಾವಿದ್ಯಾಲಯಗಳು, ಸಾಂಸ್ಥಿಕ ನಿಧಿ ಯೋಜನೆ ಅಡಿ ಆಯ್ಕೆಯಾಗಿದ್ದು, ಅಂಬೇವಾಡಿ ಕಾಲೇಜು ಸಹ ಒಂದು ಎಂಬುದು ಹೆಮ್ಮೆಯ ವಿಷಯ ಎಂದರು. ಸಾಂಸ್ಥಿಕ ಅಭಿವೃದ್ಧಿ ನಿಧಿ ಅಡಿ ಗ್ರಂಥಾಲಯ, ಬಿ.ಸಿ.ಎ ಕಟ್ಟಡ ಹಾಗೂ ವ್ಯಾಯಾಮ ಶಾಲೆಗಳ ಕಟ್ಟಡ ನಿರ್ಮಾಣಗೊಳ್ಳಲಿವೆ ಎಂದು ಅವರು ತಿಳಿಸಿದರು.

<><><>

ಪ್ರಧಾನಮಂತ್ರಿ ಕ್ಷಯ ಮುಕ್ತ ಭಾರತ ಯೋಜನೆ ಅಡಿ, ನಿಕ್ಷಯ್ ಪೋಷಣ್ ಅಭಿಯಾನ, ಯಾದಗಿರಿ ಜಿಲ್ಲೆಯ, ಹುಣಸಗಿ ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ, ಜರುಗಿತು. ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ, ಡಾಕ್ಟರ್ ಸಂಜೀವಕುಮಾರ ರಾಯಚೂರಕರ್ ಅಭಿಯಾನವನ್ನು ಉದ್ಘಾಟಿಸಿದರು. ನಿಯಮಿತ ಹಾಗೂ ಸೂಕ್ತ ಚಿಕಿತ್ಸೆಯಿಂದ, ಕ್ಷಯ ರೋಗ ಗುಣಪಡಿಸಲು ಸಾಧ್ಯ. ಭಯ ಪಡಬೇಕಾದ ಅಗತ್ಯವಿಲ್ಲ. ಮುಂಜಾಗ್ರತೆ ವಹಿಸಿ, ವೈದ್ಯರ ಸಲಹೆ ಪಾಲಿಸಿದರೆ ಸಾಕು, ಗುಣಮುಖರಾಗಬಹುದು ಎಂದು, ಅವರು ಜಾಗೃತಿ ಜಾಥಾದಲ್ಲಿ, ಸಾರ್ವಜನಿಕರಿಗೆ ತಿಳಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ವಿಜಯನಗರ ಜಿಲ್ಲೆಯಲ್ಲಿ, ಅಪೌಷ್ಟಿಕತೆ ಮಟ್ಟ, ಶೇಕಡ 5 ದಶಾಂಶ 5-3 ರಷ್ಟಿದೆ.

<><><>

ಅಪೌಷ್ಟಿಕತೆಯ ಮಟ್ಟವನ್ನು, ಶೇಕಡ 1 ಕ್ಕೆ ಇಳಿಸಲು, ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

<><><>

ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್, ಅಪೌಷ್ಟಿಕತೆಯಿಂದ ಬಳಲುವ, ಮಕ್ಕಳ ಆರೋಗ್ಯ ಸುಧಾರಣೆಗೆ, ಪೌಷ್ಟಿಕಾಂಶಯುಕ್ತ ಆಹಾರ ಒದಗಿಸಲು, ಜಿಲ್ಲಾ ಖನಿಜ ನಿಧಿ ಅಡಿ, ಹಣಕಾಸು ಕಲ್ಪಿಸಲಾಗುವುದು ಎಂದಿದ್ದಾರೆ.

<><><>

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ, ಶಿಶು ಅಭಿವೃದ್ಧಿ ನಿರೂಪಣಾಧಿಕಾರಿ ಸುಭದ್ರಾ ದೇವಿ, ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಸುಭದ್ರಾ ದೇವಿ ಧ್ವನಿ 50 ಸೆಕೆಂದುಗಳು

<><><>

ಬೀದರ್‌ನಲ್ಲಿ ಶೇಕಡ 5 ದಶಾಂಶ 6, ಬಳ್ಳಾರಿ ಜಿಲ್ಲೆಯಲ್ಲಿ ಶೇಕಡ 4 ದಶಾಂಶ 3-9 ರಷ್ಟು ಅಪೌಷ್ಟಿಕತೆ ಪ್ರಮಾಣ ದಾಖಲಾಗಿದೆ.

<><><>

ದಕ್ಷಿಣಕನ್ನಡ, ಕೊಡಗು ಸೇರಿದಂತೆ, ರಾಜ್ಯದ ಪಶ್ಚಿಮಘಟ್ಟದ ವ್ಯಾಪ್ತಿಯಲ್ಲಿ, ಮಳೆಗೆ ಭೂ ಕುಸಿತ ಸಂಭವಿಸುತ್ತಿರುವ ಹಿನ್ನೆಲೆ, ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯದ ಕುರಿತು, ಅಧ್ಯಯನ ನಡೆಸಿ, ವರದಿ ಸಲ್ಲಿಸುವಂತೆ, ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ್ ಖಂಡ್ರೆ ಸೂಚಿಸಿದ್ದಾರೆ. ಅರಣ್ಯ ಇಲಾಖೆ, ಅಪರ ಮುಖ್ಯ ಕಾರ್ಯದರ್ಶಿಗೆ, ಸಚಿವರು ಲಿಖಿತ ಸೂಚನೆ ನೀಡಿದ್ದಾರೆ. ಪಶ್ಚಿಮಘಟ್ಟಕ್ಕೆ ತೊಂದರೆಯಾದರೆ, ಮುಂಬರುವ ದಿನಗಳಲ್ಲಿ, ತೀವ್ರ ಜಲಕ್ಷಾಮ ಎದುರಾಗುವ ಭೀತಿ ಇದೆ ಎಂಬ, ತಜ್ಞರ ಅಭಿಪ್ರಾಯ ಉಲ್ಲೇಖಿಸಿರುವ ಅವರು, ಮುಂಬರುವ 3 ತಿಂಗಳೊಳಗೆ, ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯದ ಬಗ್ಗೆ ಅಧ್ಯಯನ ವರದಿ ಸಲ್ಲಿಸಲು ಸೂಚಿಸಿದ್ದಾರೆ.

<><><>

ಅಪರೂಪದ ಜೀವ ವೈವಿಧ್ಯ ತಾಣವಾದ ಪಶ್ಚಿಮಘಟ್ಟದಲ್ಲಿ, ಕರ್ನಾಟಕದ ಅರಣ್ಯಗಳ ಪೈಕಿ, ಶೇಕಡ 60 ರ ಷ್ಟು ಅರಣ್ಯ ಪ್ರದೇಶವಿದ್ದು, ಇದು ಸಸ್ಯ, ಪ್ರಾಣಿ ಹಾಗೂ ಕೀಟ ಸಂಕುಲಗಳ ನೆಲೆವೀಡಾಗಿದೆ.

<><><>

ಪಶ್ಚಿಮಘಟ್ಟಗಳು ಮಳೆಯ ಮಾರುತ ತಡೆದು, ಮಳೆ ಸುರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

<><><>

ಕೋಟಿ ವೃಕ್ಷ ಅಭಿಯಾನದಡಿ, ವಿಜಯಪುರ ನಗರದಲ್ಲಿ ಈ ವರ್ಷ 10 ಸಾವಿರ ಸಸಿಗಳನ್ನು ನೆಡಲಾಗುತ್ತಿದ್ದು, ಜಿಲ್ಲಾ ಪಂಚಾಯ್ತಿ ಆವರಣದಲ್ಲಿ, ಹೊಂಗೆ, ಬೇವು, ಹುಣಸೆ, ನೇರಳೆ, ಆಲ, ಅರಳಿ ಸೇರಿದಂತೆ, ವಿವಿಧ ಬಗೆಯ 2 ಸಾವಿರ ಸಸಿಗಳನ್ನು ನೆಡಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಎಂ.ಬಿ.ಪಾಟೀಲ, ತಿಳಿಸಿದ್ದಾರೆ. 'ಹಸಿರು ವಿಜಯಪುರ' ಆಂದೋಲನದಡಿ, ಸಸಿ ನೆಡುವ ಕಾರ್ಯಕ್ಕೆ, ಜಿಲ್ಲಾ ಪಂಚಾಯ್ತಿ ಆವರಣದಲ್ಲಿ ಅವರು ಚಾಲನೆ ನೀಡಿದರು. ಜಿಲ್ಲೆಯ ಹಸಿರು ಆವರಣ ಹೆಚ್ಚಿಸಲು, ಅರಣ್ಯ ಇಲಾಖೆಯ, ಪ್ರಾದೇಶಿಕ ಹಾಗೂ ಸಾಮಾಜಿಕ ಅರಣ್ಯ ವಿಭಾಗದಿಂದ, 4 ಲಕ್ಷ ಸಸಿಗಳನ್ನು ನೆಡುವ ಗುರಿ ನಿಗದಿ ಪಡಿಸಲಾಗಿದೆ, ಎಂದರು.

<><><>

ಕ್ಯಾಬ್‌ಗಳು ಮುಂಗಡ ಟಿಪ್ಸ್ ಪಡೆಯುವ ಬಗ್ಗೆ, ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ, ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರಕ್ಕೆ ಸೂಚನೆ ನೀಡಲಾಗಿತ್ತು; ಕ್ರಮ ಕೈಗೊಂಡ ಹಿನ್ನೆಲೆ, ಕ್ಯಾಬ್ ಸೇವೆ ಒದಗಿಸುವವರು, ತಮ್ಮ ತಪ್ಪುಗಳನ್ನು ತಿದ್ದಿಕೊಂಡಿರುವುದು ಉತ್ತಮ ಬೆಳವಣಿಗೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಹೊಸ ದಿಲ್ಲಿಯಲ್ಲಿ ಹೇಳಿದ್ದಾರೆ. ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರ, ನೋಟಿಸ್ ಜಾರಿ ಗೊಳಿಸಿದ ಹಿನ್ನೆಲೆ, ಎಚ್ಚೆತ್ತುಕೊಂಡಿರುವ ಕ್ಯಾಬ್ ಕಂಪೆನಿಗಳು, ಸಾರಿಗೆ ಸೇವಾ ಅಪ್ಲಿಕೇಷನ್‌ನಲ್ಲಿ, ಮುಂಗಡ ಟಿಪ್ಸ್‌ಗೆ ಬದಲಾಗಿ, ಸ್ವಯಂಪ್ರೇರಿತ ಟಿಪ್ಸ್, ಐಚ್ಛಿಕ ಟಿಪ್ಸ್ ಎಂಬ ಹೊಸ ಆಯ್ಕೆ ಅಳವಡಿಸಿವೆ. ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ, ಇ–ಅಪ್ಲಿಕೇಷನ್‌ಗಳ ಮೇಲೆ, ಕಟ್ಟುನಿಟ್ಟಿನ ನಿಗಾವಹಿಸಿದೆ ಎಂದು, ಸಚಿವ ಜೋಶಿ ತಿಳಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಬೂಕರ್ ಪ್ರಶಸ್ತಿ ಪಡೆದ, ಹಾರ್ಟ್ ಲ್ಯಾಂಪ್ ಕೃತಿಗಾರ್ತಿ ಬಾನು ಮುಷ್ತಾಕ್ ಹಾಗೂ ಅನುವಾದಕಿ ದೀಪಾ ಭಸ್ತಿ ಅವರಿಗೆ, ಮುಖ್ಯಮಂತ್ರಿ ಸಿದ್ಧರಾಮಯ್ಯ ಇಂದು ಬೆಳಗ್ಗೆ 11 ಗಂಟೆಗೆ, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ಸನ್ಮಾನಿಸಲಿದ್ದಾರೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಭೈರಿದೇವರಕೊಪ್ಪದ, 11 ತಿಂಗಳ ಮಗುವಿಗೆ ಕೋವಿಡ್ ದೃಢಪಟ್ಟಿದೆ. ಕೆ.ಎಂ.ಸಿ. ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ.

<><><>

'ವಿಶ್ವ ಬೈಸಿಕಲ್ ದಿನಾಚರಣೆ' ಹಿನ್ನೆಲೆ, ದಾವಣಗೆರೆಯಲ್ಲಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸಿದ್ದ, 'ಫಿಟ್ ಇಂಡಿಯಾ' ತಿರಂಗಾ ಸೈಕಲ್ ಜಾಥಾಕ್ಕೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಚಾಲನೆ ನೀಡಿದರು.

<><><>

ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್, ಇಂದು ಚಿಕ್ಕಬಳ್ಳಾಪುರ ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಗೌರಿಬಿದನೂರು ತಾಲೂಕು, ತೊಂಡೆಬಾವಿ ಗ್ರಾಮದಲ್ಲಿ, ಕುಸುಮ್– ಸಿ ಯೋಜನೆ, ಸಿದ್ಧತೆ ಪರಿಶೀಲಿಸಲಿದ್ದಾರೆ.

<><><>

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಲ್ ಕಾಮಗಾರಿ ವಿರೋಧಿಸಿ, ಪ್ರತಿಭಟನೆ ನಡೆಸಿದ, 11 ಜನರ ವಿರುದ್ಧ, ತುಮಕೂರಿನ ಗುಬ್ಬಿ ಪೊಲೀಸ್ ಠಾಣೆಯಲ್ಲಿ, ಪ್ರಕರಣ ದಾಖಲಾಗಿದೆ.

<><><>

'ಹೈನೋದ್ಯಮದ ಶಕ್ತಿಯನ್ನು, ನಾವೆಲ್ಲ ಸಂಭ್ರಮಿಸೋಣ' ಎಂಬ ಧ್ಯೇಯದೊಂದಿಗೆ, ವಿಶ್ವ ಹಾಲು ದಿನಾಚರಣೆ ಜರುಗಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಸುಗಮ್ಯ ಭಾರತ ಅಭಿಯಾನ; ವಿಶೇಷಚೇತನರ ಹಕ್ಕುಗಳ ರಕ್ಷಣೆಯಲ್ಲಿ, 9 ವರ್ಷಗಳು ಪೂರ್ಣ.
- ವಿಜಯನಗರ ಜಿಲ್ಲೆಯ ಮಕ್ಕಳಲ್ಲಿ, ಅಪೌಷ್ಟಿಕತೆ; ಖನಿಜ ನಿಧಿ ಬಳಸಿ ಪೋಷಿಸಲು, ಜಿಲ್ಲಾಡಳಿತದಿಂದ, ಕ್ರಮ.
- ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯ; ಅರಣ್ಯ ಇಲಾಖೆಯಿಂದ ಸಮಗ್ರ ಅಧ್ಯಯನ.
- ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರದಿಂದ, ಇ–ಅಪ್ಲಿಕೇಷನ್‌ಗಳ ಮೇಲೆ, ಕಟ್ಟುನಿಟ್ಟಿನ ನಿಗಾ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>